**ಶೂನ್ಯ ORGANISATION**

ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ಈ ಪೃಥ್ವಿಯ ಪುಣ್ಯದಾಲಯವಾಗಿದೆ. ಒಂದು ಕಡೆ ಮನುಷ್ಯನು ತನ್ನ ಅಸಾಮಾನ್ಯ ಬುದ್ಧಿಶಕ್ತಿ ಮತ್ತು ಸಾಹಸದಿಂದ ಈ ಪ್ರಪಂಚವನ್ನು ಸುಂದರಗೊಳಿಸಿದ್ದಾರೆ. ಮತ್ತೊಂದಡೆ ತನ್ನ ಅತಿಯಾದ ಬೇಜವಾಬ್ದಾರಿಯಿಂದ ಈ ಪ್ರಪಂಚವನ್ನು ಕುರೂಪಗೊಳಿಸಿದ್ದಾನೆ. ನಾವೆಲ್ಲರೂ ಈ ಪೃಥ್ವಿಯನ್ನು ಸುಂದರವಾಗಿಸುವ ಭಾಗವಾಗಬೇಕೆ ವಿನಃ ಕುರೂಪಗೊಳಿಸುತ್ತಿರುವ ಭಾಗವಾಗಬಾರದು. ಸುಂದರ ಪರಿಸರವನ್ನು ನಿರ್ಮಿಸಲು ನಾವೆಲ್ಲರೂ ಸಂಕಲ್ಪವನ್ನು ಮಾಡಬೇಕಿದೆ. ದೇಶಿಯ ಗೋವುಗಳ ಸಂರಕ್ಷಣೆ, ಸಾವಯವ ಕೃಷಿಯ ಉತ್ತೇಜನ, ಗ್ರಾಮಗಳ ಉದ್ಧಾರ, ಯುವಜನ ಕಲ್ಯಾಣ ಮತ್ತು ಭಾರತದ ದಿವ್ಯಸಂಸ್ಕೃತಿಯನ್ನು ಸಂರಕ್ಷಿಸಲು ಸ್ಥಾಪಿತವಾದ ಸಂಸ್ಥೆಯೇ "ಶೂನ್ಯ ಆರ್ಗನೈಜೆಶನ್"

## ಪುಣ್ಯಕೋಟಿಯ ಉಳಿಸೋಣ – ಕೋಟಿಪುಣ್ಯವ ಗಳಿಸೋಣ

ಭಾರತದೇಶವು ಕೃಷಿ ಪ್ರಧಾನ ದೇಶ. ವಿಶ್ವದಲ್ಲಿಯೇ ಎರಡನೇ ಅತಿಹೆಚ್ಚು ಕೃಷಿಗೆ ಯೋಗ್ಯವಾದ ಭೂಮಿ ಭಾರತದಲ್ಲಿದೆ. ಆದರೆ ರಾಸಾಯನಿಕ ವಸ್ತುಗಳ ಅತಿಹೆಚ್ಚು ಉಪಯೋಗದಿಂದಾಗಿ ಫಲವತ್ತಾದ ಭೂಮಿಯು ಬರಡಾಗುತ್ತಿದೆ. ಈ ಭೂಮಿಯನ್ನು ಪುನಶ್ಚೇತನಗೊಳಿಸಲು ದೇಶೀಯ ಗೋವುಗಳ ಸಂರಕ್ಷಣೆಯನ್ನು ಮಾಡಬೇಕಾದ ಅನಿರ್ವಾತೆ ಇದೆ. ಸುಮಾರು 43 ಕ್ಕೂ ಅಧಿಕ ದೇಶಿಯ ಗೋತಳಿಗಳನ್ನು ಭಾರತವು ಹೊಂದಿರುವದರಿಂದ ಗೋವುಗಳ ಸಂಖ್ಯೆಯು ಗಣನೀಯವಾಗಿ ಕುಸಿಯತೊಡಗಿರುವುದು ಅತ್ಯಂತ ಆತಂಕದ ಸಂಗತಿಯಾಗಿದೆ. ಆದಕಾರಣ ಗೋವುಗಳನ್ನು ಸಂರಕ್ಷಿಸಿ ಮನುಕುಲದ ಉದ್ಧಾರವನ್ನು ಮಾಡಬೇಕಾಗಿದೆ. ಈ ಮಹದುದ್ದೇಶಕ್ಕಾಗಿ ಶೂನ್ಯ ಸಂಸ್ಥೆಯು ಸುಸಜ್ಜಿತ ಗೋಶಾಲೆಗಳನ್ನು ನಿರ್ಮಿಸಿ ದೇಶಿಯ ಗೋತಳಿಗಳನ್ನು ಸಂರಕ್ಷಿಸಿ, ಪೋಷಿಸುವ ಸತ್ಕಾರ್ಯವನ್ನು ಕೈಗೆತ್ತಿಗೊಂಡಿದೆ.

## ಮಣ್ಣು ಉಳಿಸಿ – ಪುಣ್ಯಗಳಿಸಿ

ಮನುಷ್ಯನ ದುರಾಸೆಯಿಂದ ಫಲವತ್ತಾದ ಮಣ್ಣು ನಿರ್ಜೀವಗೊಳ್ಳುತ್ತಿದೆ. ಮಣ್ಣು ಸಕಲ ಜೀವರಾಶಿಗೂ ಆಧಾರಸ್ತಂಭವಾಗಿದೆ. ಮಣ್ಣು ಇಲ್ಲದಿದ್ದರೆ ಬದುಕಲು ಸಾಧ್ಯವಿಲ್ಲ. ಆದಕಾರಣ ನಾವೆಲ್ಲರೂ ಫಲವತ್ತಾದ ಮಣ್ಣನ್ನು ಉಳಿಸಬೇಕಾದ ಜವಾಬ್ದಾರಿ ನಮ್ಮ ಮೇಲಿದೆ. ಮಣ್ಣಿನಲ್ಲಿಯೇ ಸಕಲ ಸಂಪದಗಳು

ಲಭಿಸುತ್ತವೆ. ಶೂನ್ಯ ಸಂಸ್ಥೆಯು ಈ ದಿಸೆಯಲ್ಲಿ ಅತ್ಯಂತ ಮಹತ್ವಪೂರ್ಣವಾಗಿ ಸದುದ್ದೇಶದೊಂದಿಗೆ ಮಣ್ಣು ಉಳಿಸೋಣ ಅಭಿಯಾನವನ್ನು ಆರಂಭಿಸಿದೆ.

## ಪರಿಸರ ಸಂರಕ್ಷಣೆ– ನಮ್ಮೆಲ್ಲರ ಹೊಣೆ

ಸಕಲ ಜೀವರಾಶಿಗಳಲ್ಲಿ ಬದುಕನ್ನು ನೀಡುವ ಪರಿಸರವನ್ನು ನಾವೆಲ್ಲರೂ ಸಂರಕ್ಷಿಸಬೇಕು. ಮಾನವಲೋಕಕ್ಕೆ ಪ್ರಕೃತಿಯ ಗುರುವಾಗಬೇಕು. ಇಡೀ ಜಗತ್ತು ಸುಂದರವಾಗಬೇಕು. ಈ ಕಾರಣಕ್ಕಾಗಿಯೇ ನಾವೆಲ್ಲರು ಕಂಕಣಬದ್ದರಾಗಿ ಪ್ರಕೃತಿಯನ್ನು ಸಂರಕ್ಷಿಸಬೇಕಾಗಿದೆ. ಮನುಷ್ಯನ ಹೊರತು ಯಾವಜೀವಿಯು ಪ್ರಕೃತಿಯನ್ನು ಹಾನಿಗೊಳಿಸುವುದಿಲ್ಲ. ಅವುಗಳೆಲ್ಲವು ನಿಸರ್ಗದೊಂದಿಗೆ ಜೀವಿಸುತ್ತವೆ. ಮನುಷ್ಯನ ದುರಾಸೆಯಿಂದ ಪ್ರಕೃತಿಯು ಕ್ಷೀಣಿಸುತ್ತಿದೆ. ನಾವೆಲ್ಲರೂ ಪ್ರಕೃತಿಯನ್ನು ಉಳಿಸೋಣ. ಶೂನ್ಯ ಸಂಸ್ಥೆಯ ಸ್ವಯಂ ಸೇವಕರು ಅನೇಕ ಬಗೆಯ ಗಿಡಮರ ಬಳ್ಳಿಗಳನ್ನು ನೆಡುವುದರೊಂದಿಗೆ ಪ್ರಕೃತಿಯನ್ನು ಉಳಿಸಲು ಅಗಾಧವಾದ ಸಂಕಲ್ಪದೊಂದಿಗೆ ಮುನ್ನಡೆಯುತ್ತಿದ್ದಾರೆ.

## ಗ್ರಾಮೋದ್ದಾರ– ಭಾರತೋದ್ದಾರ

ಭಾರತವು ಗ್ರಾಮಗಳ ದೇಶವಾಗಿದೆ. ಇಲ್ಲಿ ಸುಮಾರು 6 ಲಕ್ಷ 60 ಸಾವಿರಕ್ಕಿಂತಲೂ ಅಧಿಕ ಗ್ರಾಮಗಳಿವೆ. ಗ್ರಾಮಗಳ ಉದ್ಧಾರವಾಗದ ಹೊರತು ಭಾರತದ ಉದ್ಧಾರವಾಗದು. ಗ್ರಾಮಿಣ ಜನರ ಬದುಕನ್ನು ಹಸನಾಗಿಸಲು ಸರ್ವರೂ ಕಂಕಣಬದ್ಧರಾಗಬೇಕಿದೆ. ಇಂದಿಗೂ ಅದೆಷ್ಟೋ ಗ್ರಾಮೀಣ ಭಾಗದ ಜನರು ಸಮರ್ಪಕವಾದ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಈ ದೇಶದ ಕಟ್ಟಕಡೆಯ ಗ್ರಾಮದ ಜನರು ದೇಶದ ಮುಖ್ಯವಾಹಿನಿಗೆ ಬರಬೇಕು. ಮೂಲಭೂತ ಸೌಲಭ್ಯಗಳಿಂದ ತಮ್ಮ ಬದುಕನ್ನು ಸುಂದರ ಹಾಗೂ ಸದೃಢಗೊಳಿಸಬೇಕು. ಈ ಹಿನ್ನಲೆಯಲ್ಲಿ ಶೂನ್ಯ ಸಂಸ್ಥೆಯು ಅನೇಕ ರಚನಾತ್ಮಕ ಕಾರ್ಯಕ್ರಮಗಳನ್ನು ಸಂಘಟಿಸಿ ಜನರ ಜೀವನವನ್ನು ಎತ್ತರಿಸಲು ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿದೆ.

## ಯುವಜನ ಕಲ್ಯಾಣ

ಭಾರತವು ಈ ಜಗತ್ತಿನ ಅತ್ಯಂತ ಯುವದೇಶವಾಗಿದ್ದು. ನಮ್ಮ ದೇಶದ ಪ್ರತಿಶತ ಅರವತ್ತಕ್ಕೂ ಹೆಚ್ಚು ಜನರು ಯುವವಯಸ್ಕರಿದ್ದಾರೆ. ಸರಿಯಾದ ಗುರಿಯಿಲ್ಲದೆ, ತಮ್ಮಲ್ಲಿರುವ ಅಗಾಧಶಕ್ತಿಯ ಅರಿವಿಲ್ಲದೆ ದುಶ್ಚಟಗಳಿಗೆ

ದಾಸರಾಗುತ್ತಿದ್ದಾರೆ. ಯುವಪೀಳಿಗೆಗೆ ಸರಿಯಾದ ಮಾರ್ಗದರ್ಶನ ಮಾಡಿ ಯೋಗ್ಯ ಜೀವನ ರೂಪಿಸಲು ಭಾರತ ಸರಕಾರವು ಅನೇಕ ಯೋಜನೆ– ಯೋಚನೆಗಳು ಹಮ್ಮಿಕೊಂಡಿದೆ. ಯುವಪೀಳಿಗೆಯ ಭವಿಷ್ಯ ನಿರ್ಮಾಣಕ್ಕಾಗಿ ಹಲವು ಹತ್ತು ವಿದಾಯಕ ಮತ್ತು ವಿನೂತನ ಕಾರ್ಯಯೋಜನೆಗಳನ್ನು ರೂಪಿಸಿ ಸದೃಢ ದೇಶ ನಿರ್ಮಿಸಲು ನಾವೆಲ್ಲರೂ ಟೊಂಕಕಟ್ಟಿ ನಿಲ್ಲಬೇಕಾಗಿದೆ. ಯುವಜನರಿಗಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿ ಅವರನ್ನು ಭವ್ಯಭಾರತಕ್ಕೆ ಸತ್ಪ್ರಜೆಯನ್ನಾಗಿ ಮಾರ್ಪಡಿಸಲು ಅವಿಶ್ರಾಂತವಾಗಿ ಕಾರ್ಯನಿರ್ವಹಿಸಬೇಕು. ಈ ಹಿನ್ನಲೆಯಲ್ಲಿ ಶೂನ್ಯ ಸಂಸ್ಥೆಯು ಹಲವು–ಹತ್ತು ವಿಧಾಯಕ ವಿನೂತನ ಕಾರ್ಯಕ್ರಮಗಳನ್ನು ರೂಪಿಸಿದೆ.

## ಭಾರತೀಯ ಸಂಸ್ಕೃತಿ – ಮನುಕುಲದ ಉನ್ನತಿ

ಭವ್ಯ ಭಾರತದ ದಿವ್ಯಸಂಸ್ಕ್ರತಿಯು ಅನನ್ಯವಾದುದು; ಅಮೋಘವಾದುದು. ಜಗದ ಏಳಿಗೆಯಾಗಬೇಕಾದರೆ ಭಾರತೀಯ ಸಂಸ್ಕೃತಿಯನ್ನು ಅರಿತು ಆಚರಿಸಬೇಕಾದ ಅವಶ್ಯಕತೆಯಿದೆ. ನಮ್ಮ ದೇಶದ ಮಹಾನತೆ–ಗನತೆ, ಸದಾಚಾರ–ಸದ್ವಿಚಾರ, ಹಿರಿಮೆ–ಗರಿಮೆಗಳ ಕುರಿತಾಗಿ ಜನಜಾಗೃತಿಯನ್ನು ಮಾಡಲು ಶೂನ್ಯ ಸಂಸ್ಥೆಯು ಕಾರ್ಯಪ್ರವೃತ್ತವಾಗಿದೆ. ರುದ್ರಾಕ್ಷಿಧಾರಣ, ಪ್ರವಚನ, ಜನಜಾಗೃತಿ ಪಥಸಂಚಲನ, ಭಾರತೀಯ ಸಂಸ್ಕೃತಿಯ ಪುನರುತ್ಥಾನಕ್ಕಾಗಿ ಹೀಗೆ ಹಲವು ಹತ್ತು ಕಾರ್ಯಕ್ರಮಗಳನ್ನು ಸಂಘಟಿಸುತ್ತ ನಾವೆಲ್ಲರೂ ಸಂಸ್ಕೃತಿಯ ಪುನರುಜ್ಜೀವನಕ್ಕಾಗಿ ಮುಂದಾಗಬೇಕಿದೆ. ಈ ದೇಶದ ಅಮುಲ್ಯ ಸಾಹಿತ್ಯ, ಸಂಗೀತ, ನಾಟ್ಯ, ಕಲೆ, ಮುಂತಾದ ಕ್ಷೇತ್ರಗಳತ್ತ ಗಮನ ಹರಿಸಿ ನಮ್ಮ ಸಂಸ್ಕೃತಿಯ ಮಹಿಮೆಯನ್ನು ದಶದಿಕ್ಕುಗಳಲ್ಲಿ ಸಾರಲು ಶೂನ್ಯ ಸಂಸ್ಥೆಯು ಸನ್ನದ್ಧವಾಗಿದೆ.

## ವೃದ್ಧಾಶ್ರಮ– ಅನಾಥಾಶ್ರಮ

ಹಳೆಬೇರು–ಹೊಸಚಿಗುರುಗಳನ್ನು ನಾವೆಲ್ಲ ಪೋಷಿಸಬೇಕು. ಹಿರಿಜೀವಗಳನ್ನು ಗೌರವಿಸಬೇಕು. ವಾರಸುದಾರರಿಲ್ಲದ, ಇದ್ದರೂ ನಿರ್ಲಕ್ಷ್ಯಕ್ಕೆ ಒಳಗಾದ ಹಿರಿಯ ನಾಗರಿಕರಿಗಾಗಿ ವೃದ್ಧಾಶ್ರಮ ಮತ್ತು ಪೋಷಕರಿಲ್ಲದೆ ಕಂಗಾಲಾಗಿರುವ ಅನೇಕ ಅನಾಥರಿಗಾಗಿ ಅನಾಥಾಶ್ರಮಗಳನ್ನು ನಿರ್ಮಿಸಲು ಯೋಜನೆಯು ಸಿದ್ಧಗೊಂಡಿದೆ. ಪರಮಾತ್ಮ ಸೃಷ್ಟಿಸಿರುವ ಈ ಜಗತ್ತಿನಲ್ಲಿ ಯಾರೂ ನಿರಾಶ್ರಿತರಲ್ಲ ಮತ್ತು ಅನಾಥರಲ್ಲ. ಅನೇಕರ ಬಾಳಿನಲ್ಲಿ ನವಚೈತನ್ಯವನ್ನು ಸೃಷ್ಟಿಸಲು ಸೂನ್ಯಸಂಸ್ಥೆಯು ಸುಸಜ್ಜಿತ–ಮೂಲಭೂತ ಸೌಕರ್ಯವುಳ್ಳ

ವೃದ್ಧಾಶ್ರಮ ಮತ್ತು ಅನಾಥಾಶ್ರಮಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಈ ಕಾರ್ಯಯೋಜನೆಗಳು ಸಾಕಾರಗೋಳ್ಳಲು ತಾವೆಲ್ಲರೂ ನಮ್ಮ ಜೊತೆ ಕೈಜೋಡಿಸಬೇಕು.

## ದಿವ್ಯ ಸಂಕಲ್ಪದೊಂದಿಗೆ ಒಂದೊಂದೇ ಹೆಜ್ಜೆ

ಸಕಲ ಜೀವಾತ್ಮರಿಗೂ ಲೇಸನೆ ಬಯಸುವ ಉದ್ದೇಶಕ್ಕಾಗಿ ಸ್ಥಾಪಿಸಲ್ಪಟ್ಟಿರುವ ಶೂನ್ಯ ಸಂಸ್ಥೆಯು ಮುಂದಿನ ದಿನಮಾನದಲ್ಲಿ ಅನೇಕ ಜನಪರ ಮತ್ತು ಜೀವಪರ ಯೋಚನೆ–ಯೋಜನೆಗಳನ್ನು ಸಕಾರಗೊಳಿಸಲು ಶ್ರಮಿಸುತ್ತದೆ. ಈ ಎಲ್ಲ ಕಾರ್ಯಗಳನ್ನು ಅತ್ಯಂತ ವ್ಯವಸ್ಥಿತವಾಗಿ–ಒಂದೊಂದಾಗಿ ಪೂರ್ಣಗೊಳಿಸಬೇಕಿದೆ. ಹಿನ್ನಲೆಯನ್ನು ಶೂನ್ಯ ಸಂಸ್ಥೆಯು ಒಂದೊಂದೇ ಹೆಜ್ಜೆಯನ್ನು ಸದೃಢವಾಗಿ ಇಡಲು ಹಾತೊರೆಯುತ್ತದೆ. ಯಾರು ಒಂದು ಹೆಜ್ಜೆಯನ್ನು ಎತ್ತಿಡುತ್ತಾರೆಯೋ ಅವರು ಸಾವಿರಾರು ಮೈಲುಗಳಷ್ಟು ನಡೆಯಬಲ್ಲರು. ಎತ್ತರದ ಗುಡ್ಡ–ಬೆಟ್ಟಗಳನ್ನು ಏರಬಲ್ಲರು, ಹಳ್ಳ–ಕೊಳ್ಳಗಳನ್ನು ದಾಟಬಲ್ಲರು, ಬನ್ನಿ ನಾವೆಲ್ಲರೂ ಒಂದೊಂದೆ ಹೆಜ್ಜೆಯನ್ನು ಹಾಕುತ್ತಾ ಭವ್ಯಭಾರತವನ್ನು ನಿರ್ಮಿಸೋಣ. ಸುಂದರ ಪರಿಸರವನ್ನು ಸಂರಕ್ಷಿಸೋಣ. ವಿಶ್ವಶಾಂತಿಯನ್ನು ಸ್ಥಾಪಿಸೋಣ.